


**ಚಿನ್ನಕ್ಕೇ ಅಗ್ರಸ್ಥಾನ**

'ಕಡಿಮೆಯಾದೀತೆ ಚಿನ್ನದ ಮೋಹ?' ಪ್ರೀತಿ ನಾಗರಾಜ್ ಅವರ ಮುಖಪುಟ ಲೇಖನ (ಸುಧಾ, ಜೂನ್ 14) ಚಿನ್ನದ ಬಗ್ಗೆ ಉಪಯುಕ್ತ ಮಾಹಿತಿಗಳನ್ನು ನೀಡಿದೆ. ಶ್ರೀಮಂತಿಕೆಯ ಕುರುಹಾದ ಚಿನ್ನಕ್ಕೆ ಲೋಹಗಳಲ್ಲಿಯೇ ಅಗ್ರಸ್ಥಾನ. ಚಿನ್ನದ ಉತ್ಪಾದನೆ ಹಾಗೂ ರಫ್ತು ವ್ಯವಹಾರ, ಉಪಯೋಗಗಳ ಬಗ್ಗೆ, ಆಯುರ್ವೇದೀಯ ಔಷಧಿಗಳಲ್ಲಿ ಚಿನ್ನ ಬಳಕೆಯಾಗುತ್ತಿದ್ದು ಔಷಧೀಯ ಗುಣ ಹೊಂದಿದೆ ಎಂಬ ಮಾಹಿತಿ ಲಭ್ಯವಾಯಿತು.

—ಪ್ರಾರ್ಥನಾ ಹೇಮಂತಕುಮಾರ ಬೆಂಗಳೂರು, ಮಹಾವೀರ ಕಾಸರ ಶಿವಮೊಗ್ಗ, ಕೊಹಿಮ ಬಸರಕೋಡು

**ತಿದ್ದಿಕೊಳ್ಳುವ ಗುಣ ಇರಬೇಕು**

'ವಿಚಾರ ಲಹರಿ'ಯಲ್ಲಿ 'ತಪ್ಪು ಮಾಡದವ್ರು ಯಾರವ್ರೆ?' (ಅಮೃತಮತಿ) ಬರಹ ಚೆನ್ನಾಗಿದೆ. ಪ್ರತಿಯೊಬ್ಬರೂ ಒಂದಿಲ್ಲೊಂದು ತಪ್ಪು ಮಾಡಿಯೇ ಮಾಡಿರುತ್ತಾರೆ. ಆದರೆ ಅದು ತಪ್ಪು ಎಂದು ತಿಳಿದೊಡನೆ ತಿದ್ದಿಕೊಳ್ಳುವ ಸ್ವಭಾವ ಇರಬೇಕು.

—ರುಕ್ಮಿಣಿ.ಕೃ ದೇಶಪಾಂಡೆ, ಗೋಕಾಕ

**ಮಾಹಿತಿಪೂರ್ಣ**

'ನಿಮ್ಮೊಡನೆ'ಯಲ್ಲಿ 'ಆರೋಗ್ಯ ಕ್ಷೇತ್ರ; ಏಕಿದೆ ಹೀಗೆ?' (ರಘುನಾಥ ಚ.ಹ.) ಬರಹ ಮಾಹಿತಿಪೂರ್ಣವಾಗಿದೆ.

—ಎಚ್.ಆನಂದಕುಮಾರ್ ಚಿತ್ರದುರ್ಗ

**ಬದುಕಿರುವುದೇ ಪವಾಡ**

'ವಿಷ ನಿಮ್ಮ ಮನೆಯಲ್ಲೇ ಇದೆ!' (ಡಾ. ಬೈರೇಗೌಡ ಜಿ. ಕೊಡಿಗೇಹಳ್ಳಿ) ಚಿತ್ರ ಲೇಖನವನ್ನು ಪ್ರತಿಯೊಬ್ಬರೂ ಓದಲೇಬೇಕು. ಇಂದು ಬೆಳೆ ಬೆಳೆಯುವಾಗಲೇ ಅಗತ್ಯಕ್ಕಿಂತ ಹೆಚ್ಚು ಔಷಧಿಗಳ ಸಿಂಪಡಣೆಯಿಂದ ನಾವು ತಿನ್ನುತ್ತಿರುವ ಎಲ್ಲಾ ಆಹಾರ ಪದಾರ್ಥಗಳು, ಹಣ್ಣು ಹಂಪಲುಗಳು ವಿಷಪೂರಿತವಾಗಿದ್ದು ಮತ್ತು ಕಲಬೆರಕೆ ಎಲ್ಲಾ ಆಹಾರದಲ್ಲಿ ಇದ್ದು ನಾವು ಇಂದು ಬದುಕಿರುವುದೇ ಒಂದು ಪವಾಡ.

—ಎ.ಕೆ. ಅನಂತಮೂರ್ತಿ ಬೆಂಗಳೂರು, ರತ್ನಾಕರ ಹೆಗಡೆಕಟ್ಟೆ ಮೂಡುಬಿದರೆ, ನರೇಂದ್ರ ಸಿರಕಜೆ, ಮೈಸೂರು

**ಆರೋಗ್ಯ ಕಾಳಜಿ**

ಆರೋಗ್ಯ ಅಂಕಣದಲ್ಲಿ 'ಏನಿದು ಮಲ್ಟಿಪಲ್ ಸ್ಕ್ಲೆರೋಸಿಸ್? (ಉಮಾ ಅನಂತ್) ಲೇಖನ ಜನರಲ್ಲಿ ಜಾಗೃತಿ ಮೂಡಿಸಿ ಬಡಿದು ಎಚ್ಚರಿಸುವಂತಿದೆ. ಈ ವಿರಳ ಕಾಯಿಲೆ ಬಗ್ಗೆ ಅನೇಕ ವಿಷಯ ತಿಳಿದಂತಾಯಿತು.

—ವಿ. ಹೇಮಂತಕುಮಾರ ಬೆಂಗಳೂರು

**ಚಿಕ್ಕ ದೇಶಕ್ಕೆ ಪ್ರವಾಸ**

ಪ್ರವಾಸ ಲೇಖನ '37 ಸಾವಿರ ಜನರಿಗೆ ಒಂದು ದೇಶ' (ಡಿ.ಜಿ. ಮಲ್ಲಿಕಾರ್ಜುನ) ಚೆನ್ನಾಗಿದೆ. ಯೂರೋಪ್ ಖಂಡದಲ್ಲಿಯ ಜಗದ ಆರನೆಯ ಅತಿ ಚಿಕ್ಕ ಲೀಚೆನ್‌ಸ್ಟೇನ್ ರಾಷ್ಟ್ರ ಸೈನ್ಯವೇ ಇಲ್ಲದ ದೇಶ ಎಂದು ತಿಳಿಯಿತು. ಪ್ರಕೃತಿ ಸೌಂದರ್ಯದ ಈ ದೇಶಕ್ಕೆ ಜಯವಾಗಲಿ.

—ಬಿ.ಎನ್. ಸೊಲ್ಲಾಪುರ ಬೀದರ್, ಎಂ. ಮೃತ್ಯುಂಜಯಪ್ಪ ಚಿತ್ರದುರ್ಗ

**ಪೇಡಾ ಸವಿದಷ್ಟೇ ಖುಷಿ**

ಆಹಾರ ಪುಟದಲ್ಲಿ 'ರುಚಿ ಭಾಳ ನೋಡಾ ಫಕೀರಪ್ಪನ ಪೇಡಾ' (ಶಿ.ಗು. ಹಿರೇಮಠ ಕೂಡಲಸಂಗಮ) ಲೇಖನ ಫಕೀರಪ್ಪನ ರುಚಿ ರುಚಿಯಾದ ಪೇಡಾ ಸವಿದಷ್ಟೇ ಖುಷಿಕೊಟ್ಟಿತು.

—ಪಿ. ಜಯವಂತ ಪೈ ಕುಂದಾಪುರ

**ಮಾಜಿ—ಹಾಲಿ**

ಪೇಡಾ ಲೇಖನದಲ್ಲಿ ವೀರಣ್ಣ ಚರಂತಿಮಠ ಅವರನ್ನು ಮಾಜಿ ಶಾಸಕ ಎಂದು ಬರೆಯಲಾಗಿದೆ. ಅವರು ಹಾಲಿ ಶಾಸಕರು.

—ವೀರೇಶ ಎಂ. ಪಾಟೀಲ ಬೆಂಗಳೂರು

ಈ ಶಾಸಕರು ಮೇ 12ರ ಚುನಾವಣಾ ಫಲಿತಾಂಶ ಬಂದ ಮೇಲೆ ಹಾಲಿ ಶಾಸಕರಾದದ್ದು. ಆದರೆ 'ಸುಧಾ'ದ ಈ ಲೇಖನ ಅಚ್ಚಿಗೆ ಹೋಗುವ ಮತ್ತು ಮಾರುಕಟ್ಟೆಗೆ ಬಂದ ಸಮಯದಲ್ಲಿ ಅವರು ಹಾಲಿ ಶಾಸಕರಾಗಿರಲಿಲ್ಲ.

(—ಸಂ)

**ಕೃಷಿಕ ರೋನಿಗೆ ಅಭಿನಂದನೆ**

'ಬೆಂಡೆ ಬೆಳೆದು ಗೆದ್ದ ರೋನಿ' (ವಿ. ಬಾಲಕೃಷ್ಣ ಶಿರ್ವ) ಅವರ ಲೇಖನ ಓದಿ ಖುಷಿಯಾಯಿತು. ಮೂಡಬಿದ್ರೆಯ ಯುವ ಕೃಷಿಕ ರೋನಿ ಮೆಂಡೋನ್ಸಾ ಬೆಂಡೆ, ಅಲಸಂದೆ, ಹರಿವೆ, ಹಾಗಲಕಾಯಿ ಬೆಳೆಯಲ್ಲಿ ಹೊಸ ಪ್ರಯೋಗಗಳನ್ನು ನಿರಂತರವಾಗಿ ಮಾಡುತ್ತಿರುವುದು ಅಭಿನಂದನೀಯ.

—ರವೀಂದ್ರನಾಥ ಶಿ.ಯಡಹಳ್ಳಿ, ಬಾಗಲಕೋಟೆ, ಸುಂದರ್ ಬೆಂಗಳೂರು

**ಆರಾಮದಾಯಕ ಟ್ರೌಸರ್**

'ಆಕರ್ಷಕ ಟ್ರೌಸರ್' (ಸುಲಭಾ ಆರ್.ಭಟ್) ಫ್ಯಾಷನ್ ಲೇಖನ ಸಕಾಲಿಕ. ಇಂದಿನ ಫ್ಯಾಷನ್ ಯುಗದಲ್ಲಿ ಮಹಿಳೆಯರಿಗೆ 'ಟ್ರಾಸರ್' ಆಕರ್ಷಕವೂ ಹೌದು, ಆರಾಮದಾಯಕವೂ ಹೌದು. ಆದರೆ, ಜೀನ್ಸ್ ಪ್ಯಾಂಟ್ ಮೋಹ ಸರಿಯಲ್ಲ.

—ರಾಜಶೇಖರ ಹಾದಿಮನಿ ಧಾರವಾಡ

**ಕಥೆ ಬೇಜಾರಾಯಿತು**

ಕಥೆ 'ಹಸ್ತಗಳು' (ಗೌರಿ ಚಂದ್ರಕೇಸರಿ) ಓದಿ ಬೇಜಾರಾಯಿತು. ಹೆಣ್ಣಿನಲ್ಲಿ ಧೈರ್ಯ, ಆತ್ಮಸ್ಥೈರ್ಯ ಇರಬೇಕು. ಹೆಣ್ಣುಮಕ್ಕಳೇ ಯಾವುದೇ ಕಷ್ಟವನ್ನು ಧೈರ್ಯದಿಂದ ಎದುರಿಸಿ. ಮನೆಯವರಿಗೆ ತಿಳಿಸಿ, ಪೊಲೀಸರಿಗೆ ದೂರು ಕೊಡಿ.

—ಎ.ಪಿ. ರಂಗನಾಥ್ ಮೈಸೂರು

**ತಪ್ಪು ನುಸುಳಿದೆ**

ಸೆಲೆಬ್ರಿಟಿ ಅಂಕಣದ (ಜೂನ್ 7ರ ಸಂಚಿಕೆ) 'ಅರಮನೆಯ ಸೊಸೆ' ಬರಹದಲ್ಲಿ (ಹನಿ) ತಪ್ಪು ನುಸುಳಿದೆ. ಬ್ರಿಟನ್ ರಾಜಕುಮಾರ್ ಹ್ಯಾರಿಯನ್ನು ಮದುವೆಯಾದ ಮೇಗನ್ ಮಾರ್ಕ್ಲ್‌ಗೆ 'ಡ್ಯೂಚಸ್ ಆಪ್ ಸಸೆಕ್ಸ್' ಎಂದು ಬರೆಯಲಾಗಿದೆ. ಅದು 'ಡಚೆಸ್ ಆಫ್ ಸಸೆಕ್ಸ್' ಎಂದಾಗಬೇಕು.

—ಎಸ್.ವಿ. ಶಿವಕುಮಾರ್, ಬೆಂಗಳೂರು

— ಹೌದು, ತಪ್ಪಾಗಿದೆ.. (ಸಂ)

